ಇ) 2012–13ನೇ ಸಾಲಿನಿಂದ ಇದುವರೆಗೆ 6 ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಲ್ಲಿ ಆಡಳಿತಾಧಿಕಾರಿಗಳನ್ನು, 22 ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಲ್ಲಿ ಅಧ್ಯಕ್ಷರುಗಳನ್ನು, 23 ಉಪಾಧ್ಯಕ್ಷರುಗಳನ್ನು ಮತ್ತು ಮಂಡ್ಯ, ಮೈಸೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಿಗೆ ಸದಸ್ಯರುಗಳನ್ನು ನೇಮಿಸಲಾಗಿದೆ.

ಈ) ತುಮಕೂರು ಜಿಲ್ಲಾ ವಕ್ಫ್ ಸಲಹಾ ಸಮಿತಿಗೆ ದಿನಾಂಕ: 28.06.2014 ರಂದು ನೂತನ ಅಧ್ಯಕ್ಷರ ನಾಮನಿರ್ದೇಶನ ಮಾಡಲಾಗಿದೆ.

ಉ) ಜಿಲ್ಲಾ ವಕ್ಫ್ ಸಲಹಾ ಸಮಿತಿಯನ್ನು ರಚಿಸಲು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ತುಮಕೂರಿನ ಹಜರತ್ ಮದರ್ ಷಾ ಸಮಿತಿಯ ರಚನೆ

658(24); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ತುಮಕೂರು ನಗರದ ಹಜರತ್ ಮದಾರ್ ಷಾ ಸಮಿತಿಗೆ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಾಮನಿರ್ದೇಶನ ಮಾಡಲು ಮಾನದಂಡಗಳೇನು;

ಆ) ಈ ಹಿಂದೆ ಇದ್ದ ಸಮಿತಿಯ ಅವಧಿ ಯಾವಾಗ ಅಂತ್ಯವಾಯಿತು;

ಇ) ಅವಧಿ ಮುಗಿದ ನಂತರವು ಈ ಸಮಿತಿಯನ್ನು ವಿಸ್ತರಿಸಲು ಕಾರಣಗಳೇನು;

ಈ) ಹೊಸ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಾಮನಿರ್ದೇಶನ ಮಾಡಲು ತಡವಾಗಿರುವುದಕ್ಕೆ ಕಾರಣಗಳೇನು;

ಉ) ಹೊಸ ಸಮಿತಿ ಯಾವಾಗ ರಚನೆಯಾಗುವುದು;

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಅನುಮೋದಿಸುವ ಬೈಲಾದಲ್ಲಿರುವ ಸದಸ್ಯರುಗಳ ಪೈಕಿ ಸಂಬಂಧಿಸಿದ ಸಂಸ್ಥೆಯು ತನ್ನ ಮಹಾ ಸಭೆಯಲ್ಲಿ ನಾಮನಿರ್ದೇಶಿಸಿ ಶಿಫಾರಸ್ಸು ಮಾಡುವ ಸದಸ್ಯರನ್ನು ಅಧ್ಯಕ್ಷರು ಹಾಗೂ ಪದಾಧಿಕಾರಿಯ ಹುದ್ದೆಗೆ ನೇಮಿಸಲಾಗುವುದು.

ಆ) ಈ ಹಿಂದೆ ಇದ್ದ ಸಮಿತಿಯ ಅವಧಿಯ ದಿನಾಂಕ:17–06–2014ಕ್ಕೆ ಅಂತ್ಯವಾಗಿರುತ್ತದೆ.

ಇ) ಸಮಿತಿಯ ವತಿಯಿಂದ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರೆಸಿ ಕಾರ್ಯಗತಗೊಳಿಸಲು ಸಮಿತಿಯನ್ನು ದಿನಾಂಕ: 10–07–2014 ರಿಂದ ವಿಸ್ತರಿಸಲಾಗಿದೆ.

ಈ) ಹೊಸ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಾಮನಿರ್ದೇಶನ ಮಾಡಲು ಸದಸ್ಯರುಗಳು ಸಂಸ್ಥೆಯಲ್ಲಿ ಸದಸ್ಯತ್ವವನ್ನು ನೋಂದಣಿ ಮಾಡಿಸಿದ ನಂತರ ಸಂಸ್ಥೆಯ ಮಹಾಸಭೆಯಲ್ಲಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಳ್ಳದೇ ಇರುವುದರಿಂದ ಈ ಸಮಿತಿಗೆ ಹೊಸ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಾಮನಿರ್ದೇಶನ ಮಾಡುವುದು ತಡವಾಗಿರುತ್ತದೆ.

ಉ) ಸಂಸ್ಥೆಯು ತನ್ನ ವಾರ್ಷಿಕ ಮಹಾ ಸಭೆಯಲ್ಲಿ ಸಮಿತಿಯನ್ನು ರಚಿಸಲು ನಿರ್ಣಯಿಸಿ ವಕ್ಫ್ ಮಂಡಳಿಗೆ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಕಳುಹಿಸಿದಲ್ಲಿ ಹೊಸ ಸಮಿತಿಯನ್ನು ರಚಿಸಲು ಕ್ರಮ ವಹಿಸಲಾಗುವುದು.